ಕನಿಷ್ಠ ಅರವತ್ತೈದಾದರೂ ಅವನಿಗೆ ಆಗಿರಬೇಕು. ಕೋಲುಮುಖದಲ್ಲಿ ಗಾಂಧಿ ಕನ್ನಡಕ, ಹೋತದ ಗಡ್ಡವಿತ್ತು. ಸುಮಾರಾದ ಬಟ್ಟೆಗಳನ್ನು ಹಾಕಿದ್ದ. ಅವನ ಕೈಲಿದ್ದ ಹಳೆಯ ಮಾದರಿಯ ಐಫೋನಿನ ಗಾಜು ಒಡೆದಿತ್ತು. ಅದನ್ನು ರಿಪೇರಿ ಮಾಡಿಸಲು ಸಮಯವಿಲ್ಲ ಎಂದು ಈಗೊಂದು ವರ್ಷದಿಂದ ನಮ್ಮ ಬಳಿ ಹೇಳುತ್ತ ಬಂದಿದ್ದ. ಅವನ ಕಾರು ಕೂಡ ಸುಮಾರಾಗಿತ್ತು.

ದುಡ್ಡಿದ್ದವರ ಸರಳತೆ ಅಥವಾ ದುಡ್ಡಿದೆ ಎನ್ನುವುದನ್ನು ತೋರಿಸಿಕೊಂಡು ದೊಡ್ಡವನಾಗಬೇಕೆನ್ನುವ ಹಂತವನ್ನು ದಾಟಿದ ನಿರಾಳತೆ ಅವನಲ್ಲಿತ್ತು. ಕೈ ಕೆಳಗಿನ ಸಹೋದ್ಯೋಗಿಗಳು ತನ್ನ ಸಂಪತ್ತನ್ನು ನೋಡಿ ಕರುಬದಿರಲೆಂಬ ಎಚ್ಚರಿಕೆಯ ಸೋಗೂ ಇದ್ದಿರಬಹುದು. ಲಾಭವಿಲ್ಲದ ಶೃಂಗಾರಕ್ಕೆ ಸಮಯವಿಲ್ಲದ ಬದುಕಿನ ಆಯ್ಕೆಯೂ ಆಗಿರಬಹುದು. ಹಳೆಯ ತಲೆಮಾರಿನ ಈ ಜಿಪುಣನ ಸಂತೋಷವೆಲ್ಲ ತನ್ನ ಬುದ್ಧಿವಂತಿಕೆಯನ್ನು ತಾನು ಮೆಚ್ಚಿಕೊಳ್ಳುವುದರಲ್ಲಿಯೇ ಇದೆಯೆನ್ನಿಸಿತು.

ಏನು ಮಾಡುತ್ತಾನೆ ದುಡಿದದ್ದನ್ನೆಲ್ಲ? ಸರಿಯಾದ ಸಮಯಕ್ಕೆ ದಾಡಿ ಮಾಡಿಸಲು ಕೂಡ ಅವನು ಸಮಯ ಇಟ್ಟುಕೊಂಡಿರಲಿಲ್ಲ. ಅಂಥವನು ನನ್ನ ಹತ್ತಿರ ಹತ್ತು–ಹದಿನೈದು ನಿಮಿಷ ಮಾತಾಡಲು ಬಂದಿದ್ದಾನೆಂದರೆ? ತಮಾಷೆಯೆನಿಸಿತು. ವಿನಾ ಕಾರಣ ಅವನನ್ನು ಕೆಣಕುವ ಮನಸ್ಸಾಯಿತು.



ಆಸ್ಪತ್ರೆಗಳನ್ನು ನಡೆಸುವ ಈ ವ್ಯವಹಾರದಲ್ಲಿ ಅವನಿಗೆ ನಮ್ಮ ದುಡಿತದ ಐವತ್ತು ಭಾಗ ಸೇರುತ್ತಿತ್ತು. ನಾವು ಹೆಚ್ಚು ದುಡಿದರೆ ಅವನ ಲಾಭವೂ ಹೆಚ್ಚುತ್ತಿತ್ತು. ಹಾಗಾಗಿ ನಮ್ಮನ್ನು ಕತ್ತೆಗಳೆಂದು ನಾಜೂಕಾಗಿ ಕರೆಯುತ್ತಲೇ ಹೆಚ್ಚು ದುಡಿಯಿರೆಂದು ಹೇಳಲು ಬಂದಿದ್ದ ಅವನ ಉದ್ಧಟತನ ನನ್ನನ್ನು ಕೆರಳಿಸಿತು. ತುಟಿಯಂಚಿನಲ್ಲಿ ಕಿರುನಗೆಯಿಣುಕಿ ಅವನ ಆಟದಲ್ಲಿ ನಾನೂ ಸ್ಪರ್ಧಿಸಲು ತಯಾರಾದೆ.

"ನೀವ್ಯಾಕೆ ವೈದ್ಯನ ಕೆಲಸವನ್ನು ನಿಲ್ಲಿಸಿ ಬರೀ ಆಸ್ಪತ್ರೆ ನಡೆಸುತ್ತೀದ್ದೀರಿ?'' ಅಂತ ಅತ್ಯಂತ ನಯವಾಗಿ ಕೇಳಿ ಬಹಳ ಆಸಕ್ತಿಯಿಂದ ಅವನೆಡೆ ನೋಡಿದೆ.

ತಟ್ಟನೆ ದಿಕ್ಕು ಬದಲಿಸಿ, ನನ್ನಿಂದ ಅವನ ವಿಚಾರಗಳೆಡೆ ಹರಿದ ಸಂಭಾಷಣೆಯಿಂದ ಅವನು ಅಪ್ರತಿಭನಾದಂತೆ ಕಂಡರೂ ಬಹುಬೇಗ ಸಾವರಿಸಿಕೊಂಡ.

''...ಓ ಅದೂ..." ಅಂತ ನನ್ನೆಡೆ ನೋಡಿದ. ನನ್ನನ್ನು ಅಳೆಯುವ ಆಳ ನೋಟ ಅದು.